ಅವರ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲ ಮಾಡಿಕೊಡಬೇಕು. ಆ ಶಾಲೆಯ ಹೆಡ್‌ಮಾಸ್ಟರ್ ಮತ್ತು ಮಾಸ್ಟರ್‌ಗಳು ಇವತ್ತು ಪಾಠ ಮಾಡುವುದಕ್ಕೆ ಆಗುತ್ತಿಲ್ಲ ಈ ಆಡಳಿತ ಮಂಡಳಿಯ ವ್ಯವಸ್ಥೆಯಿಂದ. ಮುನ್ನೂರು ಮಕ್ಕಳ ಭವಿಷ್ಯ ಇದರಲ್ಲಿದೆ.

ಉಪಾಧ್ಯಕ್ಷರು: ಮಾನ್ಯ ಶಿಕ್ಷಣ ಮಂತ್ರಿಗಳು ಉತ್ತರ ಹೇಳುತ್ತಾರೆ. ತಾವೆಲ್ಲರೂ ದಯಮಾಡಿ ಸಹಕರಿಸಬೇಕು. ಇನ್ನು ಮಾತನಾಡುವವರು 15 ಜನ ಇದ್ದಾರೆ.

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಈ ವಿಷಯದಲ್ಲಿ ನಾವೆಲ್ಲರೂ ಸೀರಿಯಸ್ಸಾಗಿ ಯೋಚನೆ ಮಾಡಬೇಕಾಗಿದೆ. ಈ ಬಗ್ಗೆ ಮಾಹಿತಿಯನ್ನು ತರಿಸಿಕೊಂಡು ಕೂಡಲೇ ಕ್ರಮ ಕೈಗೊಳ್ಳುತ್ತೇನೆ. ಅದು ಖಾಸಗಿ ಪ್ರೌಢಶಾಲೆಯಿದೆ ಈ ಬಗ್ಗೆ ಡಿಡಿಪಿಐ ಆವರಿಗೆ ಹೇಳಿ ಕೂಡಲೇ ಮಾಹಿತಿ ತರಿಸಿಕೊಂಡು ಸೂಕ್ತಕ್ರಮ ಕೈಗೊಳ್ಳುತ್ತೇನೆ.

(ಷ) ತಿಪ್ಪಗೊಂಡನಹಳ್ಳಿ ಕೆರೆಯ ದಂಡೆಯ ಮೇಲೆ ಟೌನ್‌ಶಿಪ್ ನಿರ್ಮಿಸುವುದರಿಂದ ಆಗುವ ತೊಂದರೆ.

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕಾನೂನು ಸಚಿವರಾದ ನಾಣಯ್ಯನವರು ಇಲ್ಲಿ ಇಲ್ಲ. ಅವರು ಇದ್ದರೆ ಚೆನ್ನಾಗಿರುತ್ತಿತ್ತು. ಮಾನ್ಯ ಅನಂತನಾಗ್‌ರವರು ಮತ್ತು ಹಿರಿಯ ಸಚಿವರುಗಳು ಇದ್ದಾರೆ. ಬೆಂಗಳೂರು ನಗರ ಅದರಲ್ಲೂ ನಗರದ ಉತ್ತರಭಾಗಕ್ಕೆ ಮಲ್ಲೇಶ್ವರಂ, ರಾಜಾಜಿನಗರ, ಬಿನ್ನಿಪೇಟೆ, ಗಾಂಧೀನಗರ ನಮಗೆ ತಿಪ್ಪಗೊಂಡನಹಳ್ಳಿ ಕೆರೆಯ ನೀರು ಅದೇ ಗಂಗೆ, ಅದೇ ತುಂಗೆ ಅದೇ ಕಾವೇರಿ. ನಮ್ಮ ಬಾಯಾರಿಕೆಯನ್ನು ಕಳೆದ 60ವರ್ಷಗಳಿಂದ ಹಿಂಗಿಸುತ್ತಾ ಬಂದಿದೆ. 1991-92ನೇ ಇಸವಿಯಲ್ಲಿ ಮಾನ್ಯ ಬಂಗಾರಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ ಆ ಜಲಾಶಯದ ದಂಡೆಯ ಮೇಲೆ 270 ಬಂಗಲೆ ಮನೆಗಳನ್ನು ಕಟ್ಟುವುದಕ್ಕೆ ಅನುಮತಿಯನ್ನು ಕೊಟ್ಟರು. ಆವೊತ್ತು ಬಿಡಬ್ಲ್ಯುಎಸ್‌ಬಿಯವರು ಆಕ್ಷೇಪಣೆ ಮಾಡಿ ವಿರೋಧಿಸಿದರು. ಮಾನ್ಯ ವೀರಪ್ಪಮೊಯಿಲಿಯವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ, ಅವರೊಂದು ದೃಢ ನಿಲುವು ತೆಗೆದುಕೊಂಡರು. ನಾನು ಅಲ್ಲಿ ಬಂಗಲೆಗಳನ್ನು ಕಟ್ಟಲಿಕ್ಕೆ ಅವಕಾಶ ಕೊಡುವುದಿಲ್ಲವೆಂದು ಹೇಳಿದರು. ಆವೊತ್ತು ಅದಕ್ಕೆ ಅಭಿನಂದನೆ. ಇನ್ನೊಂದು ಸಲ ಅಭಿನಂದನೆಯನ್ನು ಕೊಡುವುದಕ್ಕೆ ಅವಕಾಶ ಕೊಡಿ. ಈಗ ಏನಾಗಿದೆ ಅಂದರೆ ಸುಪ್ರೀಂಕೋರ್ಟ್‌ನಲ್ಲಿ ಡಿಎಲ್‌ಎಫ್ ಪರವಾಗಿ ಜಡ್ಜ್‌ಮೆಂಟ್ ಕೊಟ್ಟು 270ಬಂಗಲೆ ಮನೆಗಳನ್ನು ಕಟ್ಟುವುದಕ್ಕೆ ಒಂದು ಅವಕಾಶ ಬಂದು ಒದಗಿದೆ. ಈ ಸಂದರ್ಭದಲ್ಲಿ ನಾನು ಬೆಂಗಳೂರು ನಾಗರೀಕರ ಪರವಾಗಿ ಸರ್ಕಾರವನ್ನು ಬಹಳ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ. ಯಾವುದೇ ಕಾರಣದಿಂದ ತಿಪ್ಪಗೊಂಡನಹಳ್ಳಿ ಕೆರೆಯ ದಂಡೆಯ ಮೇಲೆ ಟೌನ್‌ಶಿಪ್ ಬರಬಾರದು. ನಾವು ಕುಡಿಯುವ ನೀರು

ಕಲುಷಿತವಾಗಬಾರದು. ತಿಪ್ಪಗೊಂಡನಹಳ್ಳಿ ಕೆರೆ ಇನ್ನೊಂದು ಅಲಸೂರು ಕೆರೆಯಾಗಬಾರದೆನ್ನುವ ದೃಷ್ಟಿಯಿಂದ ಹಿಂದೆ ಗೌರ್ನಮೆಂಟ್ ಆರ್ಡರ್ ಪ್ರಕಾರ ಕೊಟ್ಟಿರುವ ಪರ್ಮಿಷನ್ ಅನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಇದು ಸರ್ಕಾರದ ಗಮನಕ್ಕೆ ಈಗಾಗಲೇ ಬಂದಿದೆ. ಹಿಂದೆ ಆರ್ಡರ್ ಪಾಸ್ ಮಾಡಿದಾಗ ನಮ್ಮ ಮಾನ್ಯ ಲಕ್ಷ್ಮೀಸಾಗರ್‌ರವರು ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್ ಮಾಡಿದರು. ಅದು ಇಲ್ಲಿ ಕ್ಯಾನ್ಸಲ್ ಆಗಿತ್ತು. ಅವರು ಸುಪ್ರೀಂಕೋರ್ಟ್‌ಗೆ ಹೋಗಿ ಮತ್ತೆ ಅದನ್ನು ಅವರಿಗೆ ಅಲಾಟ್ ಮಾಡಬೇಕೆಂದು ಆರ್ಡರ್ ಬಂದಿದೆ. ಇದು ಸರ್ಕಾರದ ಗಮನದಲ್ಲಿದ್ದು, ಕಾನೂನು ಇಲಾಖೆಯ ಪರಿಶೀಲನೆಯಲ್ಲಿದೆ ತಕ್ಷಣ ಕ್ರಮ ಕೈಗೊಳ್ಳುತ್ತೇನೆ. ಮೊದಲಿನಿಂದಲೂ ಜಲಮಂಡಳಿ ಅಪೋಸ್ ಮಾಡುತ್ತಾ ಇದೆ. ಆದರೂ ಇದು ಆಗಿದೆ. ಅಲ್ಲಿ ಬಡಾವಣೆ ಬಾರದಂತೆ ಎಲ್ಲಾ ಕ್ರಮವನ್ನು ಕೈಗೊಳ್ಳುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ಭರವಸೆಯನ್ನು ಕೊಡುತ್ತೇನೆ.

ಶ್ರೀ ಹೆಚ್.ಎನ್.ನಂಜೇಗೌಡ (ಬಸವನಗುಡಿ): ಮಾನ್ಯ ಉಪಾಧ್ಯಕ್ಷರೆ, ನಾನು ಅಭಿನಂದಿಸುತ್ತೇನೆ ಸರ್ಕಾರವನ್ನು. ಅಲ್ಲಿ ಯಾವುದೇ ಬಡಾವಣೆ ಬರದ ಹಾಗೆ ನೋಡಿಕೊಳ್ಳುತ್ತೇವೆ, ನೀರು ಕಲುಷಿತವಾಗದ ಹಾಗೆ ನೋಡಿಕೊಳ್ಳುತ್ತೇವೆಂದು ಹೇಳಿದ್ದಾರೆ. ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಇದೆಯಲ್ಲಾ ಅದಕ್ಕೆ ನಾನು ವಿರೋಧಿಯಲ್ಲ. ಕರ್ನಾಟಕ ರಾಜ್ಯದಲ್ಲೂ ಒಂದು ಇಂಟರ್ ನ್ಯಾಷನಲ್ ಏರ್‌ಪೋರ್ಟ್ ಆಗಬೇಕು ಆಗಲಿ. ಇಲ್ಲಿ 270 ಮನೆಗಳನ್ನು ಕಟ್ಟಿದರೆ ಕಲುಷಿತವಾಗುತ್ತದೆ ನೀರು. ಇಂಟರ್ ನ್ಯಾಷನಲ್ ಏರ್‌ಪೋರ್ಟ್ ಮಾಡಿ 10 ಸಾವಿರ ಮನೆಗಳನ್ನು ಕಟ್ಟಿದರೆ ನೀರು ಕಲುಷಿತವಾಗುವುದಿಲ್ಲವೇ ಅಲ್ಲಿ? 270 ಮನೆಗಳನ್ನು ಕಟ್ಟಿದರೆ ನೀರು ಕಲುಷಿತವಾಗುತ್ತದೆನ್ನುವ ತೀರ್ಮಾನಕ್ಕೆ ಬರುವ ಸರ್ಕಾರ, ಅಲ್ಲೊಂದು ಟೌನ್ಶಿಫ್ ಡೆವಲಪ್‌ಮಾಡಿ 120 ಕೋಟಿ ರೂಪಾಯಿ ಖರ್ಚುಮಾಡಿ ನೀರು ತೆಗೆದುಕೊಂಡು ಹೋಗಿ ಕೊಟ್ಟು ಮಾಡುವುದಕ್ಕೆ ಬೇರೆ ಸ್ಥಳವಿಲ್ಲವೆ? ಅಲ್ಲಿ ಕಲುಷಿತವಾಗುತ್ತದೆನ್ನುವುದು ಗೊತ್ತಿಲ್ಲವೆ? ಅಲ್ಲಿ ಯಾರೂ ಹೇಳಲಿಲ್ಲ ನಿಮಗೆ. 270 ಮನೆಗಳನ್ನು ಕಟ್ಟಿದರೆ ಕಲುಷಿತವಾಗುತ್ತದೆ ಎನ್ನತಕ್ಕ ತೀರ್ಮಾನಕ್ಕೆ ಬಂದಿರುವ ಸರ್ಕಾರ, ಅಲ್ಲಿ 10 ಸಾವಿರ ಮನೆ ಟೌನ್‌ಶಿಫ್ ಆದರೆ ನೀರು ಕಲುಷಿತವಾಗುತ್ತದೆ ಎನ್ನುವುದು ಗೊತ್ತಿದ್ದೂ ಮಾಡುವುದಕ್ಕೆ ಯಾವುದೋ ಒಂದು ಪ್ರಬಲವಾದ ಕಾರಣ. ಇದರ ಹಿಂದೆ ಏನು ವ್ಯವಹಾರ ನಡೆದಿದೆ? ಇದಕ್ಕೆ ಏನು ಕಾರಣ? ಅದನ್ನು ನಿಲ್ಲಿಸುತ್ತೀರಾ ನೀವು? ನಿಜವಾಗಿಯೂ ಕಲುಷಿತವಾದ ನೀರು ಜನರಿಗೆ ಕುಡಿಸಬಾರದೆಂದು ಇದ್ದರೆ ಬೇರೆ ಕಡೆ ಇಂಟರ್ ನ್ಯಾಷನಲ್ ಏರ್‌ಪೋರ್ಟ್ ಮಾಡಿ. ಇದರ ಬಗ್ಗೆ ಖಚಿತವಾದ ಉತ್ತರ ಹೇಳಬೇಕು.

ಶ್ರೀ ವಾಟಾಳ್‌ನಾಗರಾಜ್: ಮಾನ್ಯ ಉಪಾಧ್ಯಕ್ಷರೆ, ಅಲ್ಲಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ಬರುವ ಕಡೆ ಕೆಲವು ಪ್ರತಿಷ್ಠಿತ ವ್ಯಕ್ತಿಗಳು ಭಾರೀ ಭಾರಿ ದೊಡ್ಡ ದೊಡ್ಡ ಜಮೀನುಗಳನ್ನು ಪಡೆದಿದ್ದಾರೆ. ಆ ಜಮೀನಿಗೆ ಉತ್ತಮವಾದ ಬೆಲೆ ಸಿಗಲಿ. ಇದೆಲ್ಲ ಒಂದು ದೊಡ್ಡ ಪಿತೂರಿ ಇದೆ ಅಲ್ಲಿ. ಆದ್ದರಿಂದ ಅವರು ತಡೆಹಿಡಿದಿದ್ದಾರೆ. ಇದರ ಬಗ್ಗೆ ಸರ್ಕಾರದ ನಿರ್ಧಾರವೇನು? ಅದನ್ನು ಯಾವಾಗ ಮಾಡುತ್ತೀರಿ? ತಮಗೆ ಇದು ಗೊತ್ತಿರಬೇಕು. ಇದರ ಬಗ್ಗೆ ಸ್ವಲ್ಪ ಹೇಳಿ.

ಶ್ರೀ ವಿ.ಮುನಿಯಪ್ಪ: ಮಾನ್ಯ ಉಪಾಧ್ಯಕ್ಷರೆ, ಈ ವಿಚಾರದಲ್ಲಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣ ದೇವನಹಳ್ಳಿಯ ಹತ್ತಿರ ಬರಬೇಕೆಂದು ನಮ್ಮ ಸರ್ಕಾರ ಕೂಡ ಪ್ರಪೋಸಲ್ಸ್ ಕಳುಹಿಸಿತ್ತು. ಈಗಿನ ಸರ್ಕಾರ ಕೂಡ ಅದನ್ನು ಎತ್ತಿಹಿಡಿದು ಅಲ್ಲೇ ಆಗಬೇಕೆಂದು ಹೇಳಿಕೆಯನ್ನು ಅನೇಕಸಾರಿ ಕೊಟ್ಟಿದ್ದಾರೆ. ಈ ವಿಷಯವನ್ನು ವಿಷಯಾಂತರ ಮಾಡಬೇಡಿ. ಮಾನ್ಯ ನಾಗರಾಜ್‌ರವರು ಬೇರೆ ಕಡೆ ಎಲ್ಲಿಯೆಂದು ನಿರ್ದಿಷ್ಟವಾಗಿ ಹೇಳಲಿ. ದಯಮಾಡಿ ಹೇಳಬೇಕು.

+ ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ನಂಜೇಗೌಡರು ಎತ್ತಿರತಕ್ಕ ವಿಷಯಕ್ಕೂ ಮಾನ್ಯ ಸುರೇಶ್‌ಕುಮಾರ್‌ರವರು ಎತ್ತಿರತಕ್ಕ ವಿಷಯಕ್ಕೂ ಸ್ವಲ್ಪ ವಿಭಿನ್ನತೆ ಇದೆ. ಬಹಳ ದಿವಸಗಳ ಹಿಂದೆ ಯಾರೋ ಒಬ್ಬರು ಸೈನಿಕರ ಸಂಘದ ಹೆಸರಿನ ಮೇಲೆ ಡಿಎಲ್‌ಎಫ್ ಮೂಲಕವಾಗಿ 300 ಮನೆಗಳನ್ನು ನೇರವಾಗಿ ತಿಪ್ಪಗೊಂಡನಹಳ್ಳಿ ಕೆರೆಗೆ ಹರಿದು ಬರತಕ್ಕ ನದಿಯ ದಂಡೆಯ ಮೇಲೆ ಕಟ್ಟತಕ್ಕ ಒಂದು ವಿಚಾರವನ್ನು ಮಾಡಿದರು. ಅದರ ವಿಚಾರದಲ್ಲಿ ಸಂಪೂರ್ಣರವಾಗಿ ನಾವೆಲ್ಲಾ ಅಧಿಕಾರದಲ್ಲಿದ್ದಾಗ ವಿರೋಧ ಮಾಡಿದ್ದೇವೆ. ಈ ಬಗ್ಗೆ ಲಕ್ಷ್ಮೀಸಾಗರ್‌ರವರು ಖಚಿತವಾದ ನಿಲುವನ್ನು ತೆಗೆದುಕೊಂಡು ಪ್ರತಿಪಾದನೆ ಮಾಡಿದ್ದಾರೆ. ಮಧ್ಯದಲ್ಲಿ ಯಾವುದೋ ಸಂದರ್ಭದಲ್ಲಿ ಇದಕ್ಕೆ ಅನುಮತಿಯನ್ನು ಕೊಟ್ಟಮೇಲೆ ಹಿಂದಿನ ಸರ್ಕಾರದ ಮುಖ್ಯಮಂತ್ರಿಗಳಾದ ಮಾನ್ಯ ವೀರಪ್ಪಮೊಯಿಲಿಯವರು ಅದನ್ನು ಮತ್ತೆ ಪ್ರತಿಪಾದನೆ ಮಾಡಿದ್ದಾರೆ. ಅದು ಆದಮೇಲೆ ಪಬ್ಲಿಕ್ ಇಂಟರೆಸ್ಟ್ ಲಿಟಿಗೇಷನ್ ಕೂಡ ಆಯಿತು. ನಮಗೆ ಗೊತ್ತಿದ್ದರೂ ಕೂಡ ಸುಪ್ರೀಂಕೋರ್ಟ್‌ನಲ್ಲಿ ತೊಂದರೆಯಾಗಿದೆ. ಇದಕ್ಕೆ ಮೇಲ್ಮನವಿಯನ್ನು ಹಾಕಬೇಕಾಗಿರತಕ್ಕದ್ದು ಏನಿದೆ ಅದರ ಬಗ್ಗೆ ಮಾನ್ಯ ಕಾನೂನು ಸಚಿವರ ಜೊತೆಯಲ್ಲಿ ಮಾತನಾಡಿ ಕ್ರಮ ಕೈಗೊಳ್ಳುತ್ತೇವೆಂದು ಮಾನ್ಯಮಂತ್ರಿಗಳು ಈಗಾಗಲೇ ಹೇಳಿದ್ದಾರೆ. ಆದರೆ 10 ಸಾವಿರ ಮನೆಯ ಟೌನ್‌ಶಿಫ್ ದೇವನಹಳ್ಳಿಯಲ್ಲಿ ಬರುತ್ತಿದೆ ಎನ್ನುವ ಮಾತು ಏನಿದೆ, ತಾವು ಯಾವಾಗಲೂ ಕೂಡ ದೇವನಹಳ್ಳಿಯಲ್ಲಿ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣವಾಗಬಾರದು ಬಿಡದಿ ಹತ್ತಿರ ಆಗಬೇಕೆನ್ನುವ ಪ್ರತಿಪಾದನೆಯನ್ನು ಮಾಡಿದ್ದೀರಿ. ಅದು ಇರಲಿ. ನಾವೀಗ ಆಯ್ಕೆಯನ್ನು ಮಾಡಬೇಕಾದ್ದು ಅದು ನಮ್ಮ ಕೈಯಲ್ಲಿ ಇಲ್ಲ. ನಮ್ಮ ಕೈಯಲ್ಲಿ ಏನಿದೆ ಅಂದರೆ ಅದಕ್ಕೆ ಬೇಕಾಗಿರತಕ್ಕ ತಂತ್ರಜ್ಞರು

ಅನುಭವಸ್ಥರು ಆ ವಿಚಾರದಲ್ಲಿ ತುಂಬಾ ಚರ್ಚೆ ಮಾಡಿದ್ದೇವೆ. ಚರ್ಚೆಮಾಡಿ ನಿರ್ಣಯ ಮಾಡಿ ದೇವನಹಳ್ಳಿಯಲ್ಲಿ ಅಂತರ ರಾಷ್ಟ್ರೀಯ ವಿಮಾನ ಕಟ್ಟಬೇಕೆಂದು ನಿರ್ಧಾರವಾದ ಮೇಲೆ ಅದರಿಂದ ನೀರು ಕಲುಷಿತವಾಗುತ್ತದೆ ಅಂದರೆ ಅಲ್ಲಿ ನದಿ ಬರುತ್ತದೆ ಎನ್ನತಕ್ಕದ್ದು ಇಲ್ಲ. ತಿಪ್ಪಗೊಂಡಹಳ್ಳಿ ಕೆರೆಗೆ ಹರಿದು ಬರತಕ್ಕ ನೀರು ಕಲುಷಿತವಾಗುತ್ತದೆ ಎಂದು ಹೇಳುವುದು ಏನಿದೆ ಆ ಭಯ ಆತಂಕ ಬೇಕಾಗಿಲ್ಲ.

ಶ್ರೀ ಹೆಚ್.ಎನ್.ನಂಜೇಗೌಡ: ಅರ್ಕಾವತಿ ನದಿಗೆ ವೇಸ್ಟೇಜ್ ಬರುತ್ತದೆ; ಟೆಸ್ಟ್ ಮಾಡಿ ಎಕ್ಸ್‌ಪರ್ಟ್ಸ್ ಒಪೀನಿಯನ್ ತೆಗೆದುಕೊಳ್ಳಿ.

ಶ್ರೀ ಎಂ.ಪಿ.ಪ್ರಕಾಶ್: ಅದು ಆಗುವ ಸಂದರ್ಭದಲ್ಲಿ ಖಂಡಿತವಾಗಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಇಡೀ ನಗರಕ್ಕೆ ನೀರು ಕೊಡತಕ್ಕ ವಿಚಾರದಲ್ಲಿ ಯಾವುದೇ ಕಾರಣಕ್ಕೆ ಕಲುಷಿತವಾದ ನೀರು ಕೊಡುವ ಕೆಲಸವನ್ನು ಸರ್ಕಾರ ಮಾಡುವುದಿಲ್ಲ. ಆಂತರರಾಷ್ಟ್ರೀಯ ವಿಮಾನ ನಿಲ್ದಾಣ ಎಲ್ಲಿ ಆಗಬೇಕು ಅಲ್ಲೇ ಆಗಬೇಕು ಅದು ತಪ್ಪಬಾರದು.

4.30 ಪಿಎಂ

ಶ್ರೀ ವಾಟಾಳ್‌ನಾಗರಾಜ್: ಬರುತ್ತದಾ ಹೋಗಲಿ? ಮಾನ್ಯ ಪ್ರಕಾಶ್‌ರವರೇ, ನಾಲ್ಕು ವರ್ಷಗಳಿಂದ ಅಲ್ಲಿ ವಿಮಾನ ನಿಲ್ದಾಣ ಬರುತ್ತದೆ, ಬರುವುದಿಲ್ಲ ಎಂಬ ವಿಚಾರಗಳೇ ಇದೆ. ಇದು ಮಾಲೂರು, ಹೊಸಕೋಟೆಗೆ ಎಲ್ಲಿ ಬೇಕಾದರೂ ಹೋಗಲಿ ವಿಮಾನ ನಿಲ್ದಾಣ ಬರಬಾರದು ಎಂದು ಹೇಳಿ ಯಾರ ಅಭ್ಯಂತರವೂ ಇಲ್ಲ. ಆದರೆ ಬರತಕ್ಕಂಥಾದ್ದು ನಿಜವೇ? ಅದನ್ನಾದರೂ ನೀವು ಸ್ಪಷ್ಟಪಡಿಸಬೇಕು.

ಶ್ರೀ ಎಂ.ಪಿ.ಪ್ರಕಾಶ್: ಮಾನ್ಯ ಉಪಾಧ್ಯಕ್ಷರೇ, ಈ ಅಂತರಾಷ್ಟ್ರೀಯ ವಿಮಾನ ನಿಲ್ದಾಣ ದೇವನಹಳ್ಳಿಯಲ್ಲೇ ಬರುತ್ತದೆ. ಅದಕ್ಕೆ ಬೇಕಾಗಿರತಕ್ಕ ಜಮೀನನ್ನು ಈಗಾಗಲೇ ನಾವು ಸ್ವಾಧೀನ ಮಾಡಿಕೊಂಡಿದ್ದೇವೆ. ಅದಕ್ಕೆ ಬೇಕಾಗಿರತಕ್ಕಂಥ ಎಲ್ಲಾ ಪೂರಕವಾಗಿರತಕ್ಕಂಥ ಸಿದ್ಧತೆಗಳನ್ನು ಮಾಡಿಕೊಂಡಿದ್ದೇವೆ. ಸ್ವಲ್ಪಮಟ್ಟಿಗೆ ಅದನ್ನು consortium ಮಾಡಿಕೊಂಡಿದ್ದರ ಬಗ್ಗೆ ವ್ಯತ್ಯಾಸ ಆಗಿದೆ.

ಶ್ರೀ ಎಂ.ವೀರಪ್ಪ ಮೊಯಿಲಿ: ಹರಪನಹಳ್ಳಿಯಲ್ಲಿ ಸ್ಟೇಟ್ ಕ್ಯಾಪಿಟಲ್ ಮಾಡಬೇಕು ಎಂಬ ಒಂದು ಅಂದಾಜು ಇದೆ. ಇಂಟರ್‌ನ್ಯಾಷನಲ್ ಏರ್‌ಪೋರ್ಟ್‌ನ್ನು ಅಲ್ಲೇ ಮಾಡಿದರೆ ಒಳ್ಳೆಯದು ಎಂದು ಹೇಳಿ ಬಹಳ ಒತ್ತು ಕೊಡುತ್ತಾರೆ.

ಶ್ರೀ ಎಂ.ಪಿ.ಪ್ರಕಾಶ್: ಕಾರ್ಕಳದಲ್ಲಿ ಆದರಂತೂ ನನಗೆ ಹೆಚ್ಚು ಸಂತೋಷ.

ಶ್ರೀ ವಾಟಾಳ್ ನಾಗರಾಜ್: ಈಗ ಕರ್ನಾಟಕದ ರಾಜಧಾನಿ ಹರಪನಹಳ್ಳಿ

ಆಗಬೇಕು ಎಂದು ಯಾರೂ ಹೇಳಿಲ್ಲವಲ್ಲಾ? ಸುಮ್ಮನೆ ಕನಸು ಕಾಣುತ್ತಿದ್ದಾರೆ.

ಶ್ರೀ ಎಂ.ಪಿ.ಪ್ರಕಾಶ್: ನಮಗೆ ನೀವು ಯಾವರೀತಿಯಾದ ನಾಣ್ಯವನ್ನು ಕೊಡುತ್ತೀರಿ, ನಾವು ಅದೇ ನಾಣ್ಯದಲ್ಲೇ ವ್ಯವಹಾರ ಮಾಡುತ್ತೇವೆ. ಮಾನ್ಯ ಉಪಾಧ್ಯಕ್ಷರೇ, ಇದು ಸನ್ಮಾನ್ಯ ಇ.ಎಸ್.ವೆಂಕಟರಾಮಯ್ಯನವರು ಹಡಗಲಿ ಅಕ್ಷಾಂಶ ರೇಖೆಯೊಳಗೆ ಕರ್ನಾಟಕದ ಮಧ್ಯಭಾಗದಲ್ಲಿ ಇದೆ. ಈಗ ತಮಿಳುನಾಡು ಮತ್ತು ಆಂಧ್ರಪ್ರದೇಶದ ಗಡಿ ಭಾಗದಲ್ಲಿ ಇರತಕ್ಕಂಥ ಬೆಂಗಳೂರಿನಿಂದಾಗಿ ಪರಭಾಷಾ ವಲಸಿಗರು ಇಲ್ಲಿ ಬಹಳ ಬರುತ್ತಿದ್ದಾರೆ. ಆಗ ಏನೋ ಕಟ್ಟರತಕ್ಕಂಥ ರಾಜಧಾನಿಯಲ್ಲಿ ಈರೀತಿಯಿಂದಾಗಿ ಜನಸಾಂದ್ರತೆ ಹೆಚ್ಚಾಗುತ್ತದೆ. ಹಡಗಲಿಯಲ್ಲಿ ನವನಗರವನ್ನು ಚಂಡೀಗಡ ಮಾದರಿಯಲ್ಲಿ ನೀವು ಮಾಡಿ ಅದಕ್ಕೆ ನಿಜಲಿಂಗಪ್ಪನವರ ಹೆಸರನ್ನು ಇಡುವಂಥ ಮಾತನ್ನು ಶ್ರೀ ಇ.ಎಸ್.ವೆಂಕಟರಾಮಯ್ಯನವರು ಹೇಳಿದರು. ಅವರಿಗೆ ಹೇಗೆ ಕಾರ್ಕಳದ ಬಗ್ಗೆ ಪ್ರೀತಿ ಇದೆಯೋ ನನಗೆ ಹಡಗಲಿ ಬಗ್ಗೆ ಪ್ರೀತಿ ಇರುವುದರಿಂದ ಆಗಬಹುದು ಎಂದು ನಾನು ಹೇಳಿದೆ. ಈಗ ಮಾನ್ಯ ಮಾಜಿ ಮುಖ್ಯಮಂತ್ರಿಗಳು ಕಾರ್ಕಳದಲ್ಲೇ ಆಗಲಿ ಎಂದು ಹೇಳಿದರೆ ನನ್ನದಂತೂ ಒಪ್ಪಿಗೆ ಇದೆ.

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಉಪಾಧ್ಯಕ್ಷರೇ....

ಉಪಾಧ್ಯಕ್ಷರು: ನೀವು ಚಾಮರಾಜನಗರದಲ್ಲಿ ಆಗಲಿ ಎಂದು ಹೇಳುತ್ತೀರಾ?

ಶ್ರೀ ವಾಟಾಳ್ ನಾಗರಾಜ್: ಈಗ ರಾಜಧಾನಿಯಾಗಿರುವ ಬೆಂಗಳೂರನ್ನು ತೆಗೆದುಕೊಂಡುಹೋಗಿ ಹಡಗಲಿಗೋ ಕಾರ್ಕಳಕ್ಕೋ ಕೊಡತಕ್ಕಂಥಾದ್ದರಲ್ಲಿ ಅರ್ಥ ಇಲ್ಲ. ಇದು ಮಹಮದ್ ಬಿನ್ ತೊಘಲಕ್ ಮಾಡಿದ ಹಾಗೆ ಆಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ: ವಿಜಯನಗರದ ಪುನರ್‌ಸ್ಥಾಪನೆ ಆಗಬೇಕಾದರೆ ಅದು ಹಂಪಿಯಲ್ಲೇ ಆಗಬೇಕಾಗುತ್ತದೆ.

ಉಪಾಧ್ಯಕ್ಷರು: ಹಿಂದೆ ಕುಳಿತವರಿಗೂ ಸ್ವಲ್ಪ ಕೇಳುವುದಕ್ಕೆ ಅವಕಾಶ ಕೊಡೋಣ. ಅವರು ಕೈ ಮೇಲೆ ಮಾಡಿ ಬಹಳ ಹೊತ್ತಾಯಿತು.

ಶ್ರೀ ಬಿ.ಚಂದ್ರಣ್ಣ: ಬಹುಶಃ ಈಗ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಬಗ್ಗೆ ಬಹಳ ಚರ್ಚೆ ಮಾಡುತ್ತಿದ್ದೇವೆ. ಬಹಳಷ್ಟು ಚರ್ಚೆಯಾಗಿ ಒಂದು ತೀರ್ಮಾನಕ್ಕೆ ಬಂದಾಗಿದೆ. ಈಗ ಮತ್ತೆ ಗಲಿಬಿಲಿಯ ವಾತಾವರಣ ನಿರ್ಮಾಣ ಮಾಡುತ್ತಿದ್ದೀರಿ. ಏಕೆಂದರೆ ನಮಗಂತೂ ಸಾಕಾಗಿಬಿಟ್ಟಿದೆ. ಏನೋ ಹೇಳುತ್ತಾರಲ್ಲಾ, ಅಲ್ಲಿರತಕ್ಕಂಥ ರೈತರಿಂದ ಜಮೀನು ಕೊಂಡುಕೊಂಡು ಬೇರೆಬೇರೆ ವ್ಯವಹಾರ ಮಾಡಿ ಅವರೇ ಇವತ್ತು ಒತ್ತಾಯ ಮಾಡುತ್ತಿದ್ದಾರೆ ಎಂದು. ಇವರು ಯಾರೂ ಒತ್ತಾಯ ಮಾಡಿಲ್ಲ. ಇದು ರಾಮನಾಥನ್ ಅವರ ವರದಿಯ ಆಧಾರದ ಮೇಲೆ ಆಗಿರತಕ್ಕಂಥಾದ್ದು. ಇದಕ್ಕೆ ರಾಜ್ಯ

ಮತ್ತು ಕೇಂದ್ರಸರ್ಕಾರ ಇಬ್ಬರೂ ಒಪ್ಪಿಕೊಂಡಿದ್ದಾರೆ. ಆದ್ದರಿಂದ ಬೇರೆ ಯಾವುದೋ ಕಾರಣಕ್ಕೋಸ್ಕರ ಮತ್ತೆ ಗಲಿಬಿಲಿ ಹುಟ್ಟಿಸುವಂಥ ಮಾಡುವಂಥ ಪ್ರಯತ್ನ ದಯಮಾಡಿ ಬೇಡ. ಅದು ಆಗುವುದಕ್ಕೆ ನಾವೆಲ್ಲರೂ ಸಹಕಾರ ಕೊಡಬೇಕು ಎಂದು ದೇವನಹಳ್ಳಿಯ ಶಾಸಕನಾಗಿ ನಾನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು: ಸುರೇಶ್‌ಕುಮಾರ್ ಅವರೇ, ನಿಮ್ಮದೇನು?

(ಚ) ಬೆಂಗಳೂರು ಸುತ್ತ ಮುತ್ತ ಕ್ಲಬ್‌ಗಳಲ್ಲಿ ನಡೆಯುತ್ತಿರುವ ಅನೈತಿಕ ಚಟುವಟಿಕೆಗಳ ಬಗ್ಗೆ.

+ ಶ್ರೀ ಎಸ್.ಸುರೇಶಕುಮಾರ್ (ರಾಜಾಜಿನಗರ): ನಾನು ಒಂದು ವಾರದಿಂದ ಮಾನ್ಯ ಕಾನೂನು ಸಚಿವರಾದ ನಾಣಯ್ಯನವರಿಗೋಸ್ಕರ ಕಾಯುತ್ತಿದ್ದೆ. ಇವತ್ತು ಒಂದು ವಾರದ ಹಿಂದೆ ಹಿರಿಯ ಸಚಿವರಾದ ಮಾನ್ಯ ಪ್ರಕಾಶ್‌ರವರು ನನಗೆ ಆಶ್ವಾಸನೆ ಕೊಟ್ಟು ಮಾರನೇ ದಿವಸವೇ ಬೆಂಗಳೂರಿನ ಸುತ್ತಮುತ್ತ ನಟೋರಿಯಸ್ ಆಕ್ಟಿವಿಟೀಸ್ ನಡೆಸುತ್ತಿರುವ ಕ್ಲಬ್‌ಗಳ ಬಗ್ಗೆ ಸರ್ಕಾರದ ನಿಲುವಿನ ಬಗ್ಗೆ ಒಂದು ವಿವರವಾದ ಹೇಳಿಕೆಯನ್ನು ಕೊಡಿಸುತ್ತೇನೆ ಎಂದು ಹೇಳಿದ್ದರು. ಒಂದು ವಾರದಿಂದ ನಾನು ಪ್ರತಿದಿವಸ ಜಾತಕಪಕ್ಷಿಯಂತೆ ಕಾಯುತ್ತಿದ್ದೆ. ದಯವಿಟ್ಟು ಈಗ ಆ ವರದಿಯನ್ನು ಕೊಡಿಸಿಕೊಡಿ.

ಶ್ರೀ ಎಂ.ಸಿ.ನಾಣಯ್ಯ: ಮಾನ್ಯ ಸಭಾಧ್ಯಕ್ಷರೇ, ಮಿತ್ರರಾಗಿರತಕ್ಕಂಥ ಸುರೇಶ್‌ಕುಮಾರ್ ಅವರು ಮತ್ತು ಅವರ ಸ್ನೇಹಿತರು ಕಳೆದವಾರ ಈ ಸದನದಲ್ಲಿ ಇಲ್ಲಿ ನಡೆಯುತ್ತಿರುವಂಥ ಕೆಲವು ಕ್ಲಬ್‌ಗಳು ಮತ್ತು ರೆಸಾರ್ಟ್‌ಗಳು ಅಲ್ಲಿ ನಡೆಸುತ್ತಾ ಇರತಕ್ಕಂಥ ಚಟುವಟಿಕೆಗಳ ಬಗ್ಗೆ ವಿವರವಾಗಿ ಪ್ರಸ್ತಾಪ ಮಾಡಿದ್ದಾರೆ. ಅಲ್ಲಿ ನಡೆಸತಕ್ಕಂಥ ಅನೈತಿಕ ಚಟುವಟಿಕೆಗಳ ಬಗ್ಗೆ ಅವರು ಪ್ರಸ್ತಾಪ ಮಾಡಿದ್ದಾರೆ. ಮತ್ತೆ ಮಾನ್ಯ ಸುರೇಶಕುಮಾರ್ ಅವರು ಅಲ್ಲಿ ಡ್ರಗಿಂಗ್ ಆ ಕೆಲಸ ನಡೆಯುತ್ತಿದೆ, ಅರೆಬೆತ್ತಲೆ, ಡಿಸ್ಕೊಡ್ಯಾನ್ಸ್‌ಗಳು ನಡೆಯುತ್ತವೆ ಮತ್ತು ಮಧ್ಯರಾತ್ರಿ ಕಳೆದಮೇಲೆ ಅಪರರಾತ್ರಿಯಲ್ಲಿ ಕೂಡ ಈ ತರಹ ಚಟುವಟಿಕೆಗಳು ನಡೆಯುತ್ತವೆ ಎನ್ನತಕ್ಕಂಥಾದ್ದನ್ನು ಹೇಳಿದ್ದಾರೆ. ಮತ್ತು 6ನೇ ತಾರೀಖು ಆ ಕ್ಲಬ್‌ನಲ್ಲಿ 'ಹಾಲೋವೀನ್' ಎಂದು ಹೇಳುತ್ತಾ ಇರತಕ್ಕಂಥ ಮಧ್ಯರಾತ್ರಿ ಮೇಲೆ ನಡೆಯತಕ್ಕಂಥ ಯಾವುದೋ ಡ್ಯಾನ್ಸ್ ಪ್ರೋಗ್ರಾಮ್ ನಡೆಯುತ್ತದೆ ಅದನ್ನು ತಾವು ನಿಲ್ಲಿಸಬೇಕು ಎಂದು ಕೇಳಿದ್ದರು. ನಾವು ಕೂಡಲೇ ಅದಕ್ಕೆ ಸ್ಪಂದಿಸಿದ್ದೇವೆ. ಕೂಡಲೇ ಪೊಲೀಸ್ ಕಮಿಷನರ್ ಅವರಿಗೆ ಆದೇಶವನ್ನು ಕೊಟ್ಟು ಅದನ್ನು ನಡೆಸಕೂಡದು ಎಂದು ಹೇಳಿದ್ದೇವೆ. ಕಡೆಗೆ ನೀವು ಹೇಳಿದ ಪ್ರಕಾರ ಸದನಕ್ಕೆ ಗೌರವ ಕೊಟ್ಟು ಆ ಕೆಲಸವನ್ನು ನಾವು ಮಾಡಿದ್ದೇವೆ. ಆ ಡ್ಯಾನ್ಸ್ ಯಾರ ತರಹ ಇರುತ್ತದೋ ನನಗಂತೂ ಗೊತ್ತಿಲ್ಲ. ನೋಡಿದವರು ಯಾರೋ ಅದೂ ಗೊತ್ತಿಲ್ಲ. ಈ 'ಹಾಲೋವೀನ್' ಎಂದು ಹೇಳುತ್ತಿರತಕ್ಕಂಥಾದ್ದು, ಒಂದನ್ನು ನಾನು ತಿಳಿಸಬೇಕಾಗುತ್ತದೆ. ಕೆಲವು ಸಂದರ್ಭದಲ್ಲಿ ನಾವು ಇತಿಹಾಸನವನ್ನು